ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 254

**5 ಮೇ 2023 * ಶುಕ್ರವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರ

## ಗಾಯನ



ವಿದ್ವಾನ್ ಸಾಕೇತ್ ರಾಮನ್



ವಿದ್ವಾನ್ ಎಚ್.ಕೆ. ವೆಂಕಟರಾಮ್
ವಯೊಲಿನ್



ವಿದ್ವಾನ್ ವಿಜಯ್ ಬಿ. ನಟೇಶನ್
ಮೃದಂಗ



ವಿದ್ವಾನ್ ಶಮಿತ್ ಎಸ್. ಗೌಡ
ಘಟಂ

**ಸರ್ವರಿಗೂ ಹಾರ್ದಿಕ ಸುಸ್ವಾಗತ**

**ವಿದ್ವಾನ್ ಸಾಕೇತ್ ರಾಮನ್** ರವರ ಜೀವನವೇ ಸಂಗೀತಸಂಭ್ರಮದಿಂದ ತುಂಬಿಹೋಗಿದೆ. ವಯೊಲಿನ್ ಮಾಂತ್ರಿಕ ಪದ್ಮಭೂಷಣ ಲಾಲ್ ಗುಡಿ ಜಯರಾಮನ್‌ರವರ ಪರಂಪರೆಯಲ್ಲಿ ಬಂದ ಇವರು ಶ್ರದ್ಧಾಭಕ್ತಿಗಳಿಂದ ಸಂಗೀತದ ಮೆಟ್ಟಿಲುಗಳನ್ನು ಏರುತ್ತಿದ್ದಾರೆ. ಸಂಗೀತಕಲಾನಿಧಿ ಟಿ.ವಿ. ಗೋಪಾಲಕೃಷ್ಣನ್, ನಾಗೈ ಮುರಳೀಧರ್, ವಿದುಷಿಯರಾದ ಗೀತಾ ರಾಜಾ, ರುಕ್ಮಿಣಿ ರಮಣಿ, ಸಾವಿತ್ರಿ ಸತ್ಯಮೂರ್ತಿ ಮತ್ತು ವಿದ್ವಾನ್ ಶ್ರೀರಂಗಂ ಕೃಷ್ಣಮೂರ್ತಿರಾವ್‌ರವರುಗಳಿಂದ ಸಂಗೀತದ ಉನ್ನತ ಶಿಕ್ಷಣ. ಆರನೆಯ ವಯಸ್ಸಿಗೆ ಸಂಗೀತಕ್ಷೇತ್ರಕ್ಕೆ ಕಾಲಿಟ್ಟವರು. ಅಸಾಧಾರಣ ಪ್ರತಿಭೆ ಮತ್ತು ಸತತ ಪರಿಶ್ರಮಗಳಿಂದಾಗಿ ಬಹಳ ಬೇಗನೆ "ಪಲ್ಲವಿ ಯುವರಾಜ" ಎಂಬ ಹೆಸರು ಪಡೆದರು. ಇವರ ಸಂಗೀತದಲ್ಲಿ ಪರಂಪರೆಯ ಶುದ್ಧಿ, ಹೊಸತನದ ಹುಡುಕಾಟ ಮತ್ತು ಬುದ್ಧಿಭಾವಗಳ ಅಪರೂಪದ ಸಂಗಮವಿದೆ. "ಸಂಗೀತವೆನ್ನುವುದು ಹರಿಯುವ ಗಂಗೆಯಂತಿರಬೇಕು" ಎಂಬುದು ಇವರ ವ್ಯಾಖ್ಯಾನ. ಶ್ರೋತೃಗಳನ್ನು ರಸಗಂಗೆಯಲ್ಲಿ ಮೀಯಿಸಬೇಕೆಂಬ, ತೋಯಿಸಬೇಕೆಂಬ ಒಂದೇ ಉತ್ಸಾಹ. ಇವತ್ತಿನ ಹಿರಿಯ ಕಲಾವಿದರಲ್ಲಿ ಮುಂಚೂಣಿಯಲ್ಲಿರುವವರು. ಈ ಅಪರೂಪದ ಕಲಾವಿದರು, ಸಂಗೀತವನ್ನು ಶಿಕ್ಷಣ ಮತ್ತು ಚಿಕಿತ್ಸೆಗಳಿಗೂ ಬಳಸಿಕೊಳ್ಳಬಹುದೆಂಬ ವಿಶ್ವಾಸವುಳ್ಳವರು. ಚೆನ್ನೈನಲ್ಲಿರುವ ಸಮುದಿತಾ ಫೌಂಡೇಷನ್ ಮೂಲಕ ಅವರು ನಂಬಿದ ಮೌಲ್ಯಗಳನ್ನು ನನಸಾಗಿಸಲು ಪ್ರಯತ್ನಿಸುತ್ತಿದ್ದಾರೆ. ಇವರ ಪ್ರತಿಭೆಯನ್ನರಸಿ ಬಂದಿರುವ ಪ್ರಶಸ್ತಿಗಳು ಹಲವಾರು; ಸಂಗೀತ ನಾಟಕ ಅಕ್ಯಾಡೆಮಿ ಪ್ರಶಸ್ತಿ, ಇಸೈ ಪೇರೊಲಿ, ಷಣ್ಮುಖ ಸಂಗೀತ ಶಿರೋಮಣಿ ಅವುಗಳಲ್ಲಿ ಪ್ರಮುಖವಾದುವು. ಭಾರತದ ಬಹುತೇಕ ನಗರಗಳಲ್ಲಿ ಇವರ ಸಂಗೀತ ಕಚೇರಿಗಳು ನಡೆದಿವೆ. ಕ್ಲೀವ್‌ಲ್ಯಾಂಡ್ ತ್ಯಾಗರಾಜ ಉತ್ಸವ, ಬಾಸ್ಟನ್ನಿನ ಲರ್ನ್ ಕ್ವೆಸ್ಟ್ ಸಮ್ಮೇಳನಗಳಲ್ಲದೆ, ಕೆನಡಾ, ಫ್ರಾನ್ಸ್, ಆಸ್ಟ್ರೇಲಿಯ, ಜರ್ಮನಿ ಮುಂತಾದ ದೇಶಗಳಲ್ಲಿಯೂ ಕರ್ನಾಟಕ ಸಂಗೀತವನ್ನು ಜನಪ್ರಿಯಗೊಳಿಸಿದ್ದಾರೆ.

**ವಿದ್ವಾನ್ ಎಚ್.ಕೆ. ವೆಂಕಟರಾಮ್‌ರವರು** ಸಂಗೀತದ ಕೌಟುಂಬಿಕ ಹಿನ್ನೆಲೆಯಿಂದ ಬಂದವರು. ತಂದೆ ಸಂಗೀತ ಕಲಾರತ್ನ ಪ್ರೊ. ಎಚ್.ವಿ. ಕೃಷ್ಣಮೂರ್ತಿಯವರು ಮೊದಲ ಗುರುಗಳು. 11ನೆಯ ವಯಸ್ಸಿಗೇ ಬೆಂಗಳೂರಿನಲ್ಲಿ ಸಾರ್ವಜನಿಕ ಕಚೇರಿ. ಇಂಟೆಲ್ ಕಾರ್ಪೊರೇಷನ್ನಿನ ಆರ್&ಡಿ ವಿಭಾಗದಲ್ಲಿ ಮೂರು ವರ್ಷಕ್ಕಿಂತಲೂ ಹೆಚ್ಚು ಸೇವೆ ಸಲ್ಲಿಸಿರುವ ಇವರು ಸಂಗೀತಕ್ಷೇತ್ರದ ಸವ್ಯಸಾಚಿ

ಪ್ರತಿಭೆ. ಆಕಾಶವಾಣಿಯ "ಎ" ಶ್ರೇಣಿ ಕಲಾವಿದರು. ತಂದೆಯವರು ಸ್ಥಾಪಿಸಿದ ವಿಜಯ ಕಾಲೇಜ್ ಆಫ್ ಮ್ಯೂಸಿಕ್‌ನ ಪ್ರಾಂಶುಪಾಲರು. ದೇಶವಿದೇಶಗಳಲ್ಲಿ ಖ್ಯಾತರಾಗಿರುವ ಇವರು ಗಾನವಾರಿಧಿ, ಸತ್ಯಶ್ರೀ ಮೊದಲಾದ ಪ್ರಶಸ್ತಿಗಳಲ್ಲದೆ ಕಂಚಿ ಕಾಮಕೋಟಿ ಪೀಠದ ಆಸ್ಥಾನ ವಿದ್ವಾನ್ ಗೌರವಕ್ಕೂ ಪಾತ್ರರಾಗಿದ್ದಾರೆ. ತಂತ್ರಜ್ಞಾನದ ನೈಪುಣ್ಯವನ್ನು ಸಂಗೀತಕ್ಷೇತ್ರಕ್ಕೂ ಅಳವಡಿಸಿರುವ ಹಿರಿಮೆ ಇವರದು. "ತ್ಯಾಗರಾಜ ವಚನಾಮೃತ" ಇವರು ರಚಿಸಿರುವ ಮೌಲಿಕ ಶಾಸ್ತ್ರಗ್ರಂಥ. ಇತರ ಸಂಗೀತ ವಿದ್ವಾಂಸರ ಜೊತೆಗೂಡಿ ಪ್ರದರ್ಶಕ ಕಲೆಗಳ ಒಂದು ಭಂಡಾರವನ್ನು ಸ್ಥಾಪಿಸುವ ಉದ್ದೇಶದಿಂದ "ಶಬ್ದ" ಎಂಬ ಮಹತ್ವದ ಯೋಜನೆಯನ್ನು ರೂಪಿಸಿದ್ದಾರೆ.

**ವಿದ್ವಾನ್ ವಿಜಯ್ ಬಿ. ನಟೇಶನ್‌ರವರು** ವಿದ್ವಾನ್ ಟಿ.ಎಸ್. ನಂದಕುಮಾರ್ ಮತ್ತು ವಿದ್ವಾನ್ ಟಿ.ವಿ. ಗೋಪಾಲಕೃಷ್ಣನ್‌ರವರ ಶಿಷ್ಯರು. ಆಲ್ ಇಂಡಿಯಾ ರೇಡಿಯೋದ ಟಾಪ್ ಗ್ರೇಡ್ ಪಡೆದ ಅತ್ಯಂತ ಕಿರಿಯ ಕಲಾವಿದರು. 12ನೆಯ ವರ್ಷದಲ್ಲಿಯೇ ಪ್ರೊ. ಟಿ.ಎನ್. ಕೃಷ್ಣನ್‌ರವರ ಸಂಗೀತಕ್ಕೆ ಸಾಥ್ ನೀಡಿದ ಹೆಗ್ಗಳಿಕೆ. "ನಾಮ್, ಎ ಸ್ಕೂಲ್ ಆಫ್ ನಾದಲಯಮ್" ಸಂಸ್ಥೆಯ ಮೂಲಕ ದಕ್ಷಿಣ ಭಾರತದ ಎಲ್ಲ ಲಯವಾದ್ಯಗಳ ಅಭಿವೃದ್ಧಿಗೆ ಪ್ರಯತ್ನ. ಸ್ಪಿಕ್‌ಮ್ಯಾಕೆ ಕಚೇರಿಗಳಲ್ಲಿ ಹಲವಾರು ಬಾರಿ ಭಾಗವಹಿಸಿದ್ದಾರೆ. ಕಂಚಿ ಕಾಮಕೋಟಿ ಆಸ್ಥಾನ ವಿದ್ವಾನ್ ಪ್ರಶಸ್ತಿ ಸೇರಿದಂತೆ ಹತ್ತಾರು ಪ್ರತಿಷ್ಠಿತ ಪುರಸ್ಕಾರಗಳಿಗೆ ಭಾಜನರು. ದೇಶವಿದೇಶಗಳಲ್ಲಿ ಕರ್ನಾಟಕ ಸಂಗೀತದ ಪ್ರದರ್ಶನ, ಪ್ರಸಾರ. ಪಂ. ಜಸರಾಜ್‌ರೊಡನೆ ನ್ಯೂಯಾರ್ಕ್ ಮತ್ತು ವಾಷಿಂಗ್ಟನ್ ನಗರಗಳಲ್ಲಿ ಕಾರ್ಯಕ್ರಮ ನೀಡಿದ ಹಿರಿಮೆ.

**ವಿದ್ವಾನ್ ಶಮಿತ್ ಎಸ್. ಗೌಡರವರು** ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ ಮತ್ತು ವಿದ್ವಾನ್ ಗಿರಿಧರ್ ಉಡುಪ ಅವರುಗಳ ಶಿಷ್ಯರು. ಕರ್ನಾಟಕ ರಾಜ್ಯ ಮಟ್ಟದ ತಾಳವಾದ್ಯ ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಕರ್ನಾಟಕ ಸಂಗೀತ ನೃತ್ಯ ಅಕ್ಯಾಡೆಮಿಯ ವಿದ್ಯಾರ್ಥಿವೇತನ ಪಡೆದ ಪ್ರತಿಭಾನ್ವಿತರು. ಹಲವಾರು ಪ್ರತಿಷ್ಠಿತ ಸಂಗೀತ ವೇದಿಕೆಗಳಲ್ಲಿ ಘಟಂ ವಾದನದ ಪ್ರಸ್ತುತಿ. ಮದ್ರಾಸ್ ಮ್ಯೂಸಿಕ್ ಅಕ್ಯಾಡೆಮಿ ಆಯೋಜಿಸಿದ 'ಸ್ಪಿರಿಟ್ ಆಫ್ ಯುವಜನೋತ್ಸವ'ದಲ್ಲಿ ಭಾಗವಹಿಸಿದ್ದರು. ವೃತ್ತಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್.

# ಬೆಳದಿಂಗಳ ಸಂಗೀತ 255

## 4 ಜೂನ್ 2023

### ಗಾಯನ

ವಿದುಷಿ ಸೂರ್ಯಗಾಯಿತ್ರಿ

### ವಯೊಲಿನ್

ವಿದ್ವಾನ್ ಸಿ.ವಿ. ಸುನಿಲ್ ಕುಮಾರ್





### ಮೃದಂಗ

ವಿದ್ವಾನ್ ಪಿ.ವಿ. ಅನಿಲ್ ಕುಮಾರ್

### ಘಟಂ

ವಿದ್ವಾನ್ ವಾಜಪಳ್ಳಿ ಕೃಷ್ಣಕುಮಾರ್



**ಫೋನ್: 0821–2548221, 2548223 * ಇಮೇಲ್: sutturmath@jssonline.org**